# ಲಂಚವೆಂದರೆ...

ಕನ್ನಡ ಮಾಧ್ಯಮದಲ್ಲಿಯೇ ಓದಿಸಬೇಕೆಂಬ ಗಟ್ಟಿ ನಿರ್ಧಾರದ ಅವ್ವ ಅಪ್ಪ, ಮಗಳನ್ನು ಅನಿವಾರ್ಯವಾಗಿ ಸರಕಾರಿ ಶಾಲೆಗೆ ಸೇರಿಸಿದರು. ಖಾಸಗಿ ಶಾಲೆಯಲ್ಲಿ ಪ್ರವೇಶಕ್ಕೆ ಕೊಡಬೇಕಾದ ದೇಣಿಗೆ ರೂಪದ ಲಂಚವನ್ನು ತೆರುವ ತಾಕತ್ತು ಅವರಿಗಿಲ್ಲದಿದ್ದುದೇ ಈ ನಿರ್ಧಾರದ ಹಿಂದಿನ ಮೂಲ ಕಾರಣ. ಮಗು ಶಾಲೆಗೆ ಹೋಗಿ, ಕನ್ನಡವನ್ನು ಚೆನ್ನಾಗಿ ಓದಲು ಬರೆಯಲು ಕಲಿಯಿತು.

ಅಪ್ಪ ಅವ್ವ ಇಬ್ಬರಿಗೂ ಭ್ರಷ್ಟ ವ್ಯವಸ್ಥೆಯ ಬಗ್ಗೆ ವಿಪರೀತ ಸಿಟ್ಟು. ಆಗಾಗ ಅವರಿಬ್ಬರೂ ಮಾತಾಡಿಕೊಳ್ಳುವಾಗ ಲಂಚ–ಭ್ರಷ್ಟಾಚಾರವೇ ಮೊದಲಾದ ಶಬ್ದಗಳನ್ನು ಮತ್ತೆ ಮತ್ತೆ ಬಳಸುತ್ತಿದ್ದರು. 'ಈ ಹರಾಮ್‌ಖೋರ್ ಜನಕ್ಕೆ ಎಷ್ಟ್ ಲಂಚಾ ತಿಂದ್ರೂ ಸಾಲ್ತಾ ಇಲ್ಲ' ಎಂದು ಬೈಯ್ಯುತ್ತಿದ್ದರು. ತಮ್ಮ ಮಗುವಿಗೆ ಒಂದು ಒಳ್ಳೆಯ ಖಾಸಗಿ ಶಾಲೆಯಲ್ಲಿ ಪ್ರವೇಶ ಕೊಡಿಸಲಾಗಲಿಲ್ಲವಲ್ಲ ಎಂಬ ಕೊರಗೇ ಅವರ ಸಿಟ್ಟಿನ ಮುಖ್ಯ ಕಾರಣವಾಗಿತ್ತು.

ತಂದೆ ತಾಯಂದಿರು ಮತ್ತೆ ಮತ್ತೆ ಬಳಸುತ್ತಿದ್ದ ಆ ಶಬ್ದಗಳನ್ನು ಕೇಳುತ್ತಿದ್ದ ಮಗುವಿಗೆ ವಿಚಿತ್ರ ಕುತೂಹಲ! 'ಲಂಚ ಅಂದ್ರೆ ಏನಿರಬೌದು? ಲಂಚಾ ತಿಂತಾರೆ ಅಂತಾರಲ್ಲ, ಹಾಗಿದ್ರೆ ಆದೇನಾದ್ರೂ ಟಿಫಿನ್ ಬಾಕ್ಸಿನಲ್ಲಿ ಒಯ್ಯಬಹುದಾದ ತಿಂಡಿ ಇರಬಹುದೆ? ಹಾಗೇನಾದ್ರೂ ಇದ್ರೆ ಅದರ ರುಚಿ ಹೇಗಿರಬೌದು? ನನಗೂ ತಿನ್ನಲು ಅದು ದೊರೆಯಬಹುದೆ?' ಅಂತ ತರಹೆವಾರಿ ಪ್ರಶ್ನೆಗಳು ಅದರ ತಲೆಯಲ್ಲಿ! ಒಂದು ದಿನ ಕುತೂಹಲ ತಡೆಯಲಾರ್ದೆ ಆ ಕೂಸು, "...ಏನಮ್ಮಾ, ಅಪ್ಪ ಮತ್ತು ನೀನು ದಿನಾಲೂ ಲಂಚ, ಲಂಚ ಅಂತಿರ್ತೀರಿ. ಲಂಚಾ ತಿಂತಾರೆ ಅಂತ ಕೂಡಾ ಮಾತಾಡ್ತಿರ್ತೀರಿ. ಏನು ಹಂಗಂದ್ರೆ? ಲಂಚ ಅಂದ್ರೆ ಏನಮ್ಮಾ?" ಅಂತ ತನ್ನ ಸಹಜ ಕುತೂಹಲದ ಪ್ರಶ್ನೆಯನ್ನ ಹೊರಹಾಕಿಬಿಡ್ತದೆ.

ಸಿಟ್ಟು ಎಲ್ಲಿತ್ತೋ ಆ ತಾಯಿಗೆ, ಹಿಂದೆ ಮುಂದೆ ನೋಡದೆ, ಒಮ್ಮೆಲೇ, "ಏನೇ ಲಂಚ ಅಂದ್ರೆ ಏನಾ? ಅಷ್ಟೂ ಗೊತ್ತಿಲ್ವೇನೆ? ಲಂಚ ಅಂದ್ರೆ ಹೇಲು! ಗೊತ್ತಾಯ್ತಾ? ಹೇಲು" ಅಂತ ಒಂದೇ ಏಟಿಗೆ ಉಸಿರುಬಿಟ್ಲು.

ಮಗುವಿಗೆ ಇನ್ನೂ ದಿಗಿಲುಕುತೂಹಲ! ಅದು ತನ್ನ ಮುಗ್ಧ ಮಾತಲ್ಲೇ ಸಹಜವಾಗಿ ಕೇಳ್ತದೆ: "...ಅಲ್ಲಮ್ಮಾ, ಲಂಚ ಅಂದ್ರೆ ಹೇಲು ಅಂತೀಯಾ, ಅದನ್ನ ದಿನಾಲೂ ತಿಂತಾರೆ ಅಂತಾನೂ ಹೇಳ್ತೀಯಾ. ಹೇಲನ್ನ ಯಾರಾದ್ರೂ ತಿಂತಾರೆಯೆ? ತಿನ್ನೋಕಾಗ್ತದೆಯೆ?"

"ಇನ್ನೇನೇ? ಅಂಥವರು ತಿನ್ನೋದು ಇನ್ನೊಬ್ಬರ ಹೇಲನ್ನೇ ಅಲ್ವೆ?" ಎನ್ನುತ್ತ ಅಡುಗೆ ಮನೆಯತ್ತ ಅವಸರದಿಂದ ನಡೆದುಬಿಟ್ಟಳು ಆ ತಾಯಿ.

ಮಗುವಿನ ಮುಖ ಒಮ್ಮೆಲೇ ಭೀಭತ್ಸ ರಸದಲ್ಲಿ ಅದ್ದಿ ತೆಗೆದ ರೂಪಕ್ಕೆ ಪರಿವರ್ತಿತವಾಯ್ತು. ಅದು, "... ಛೀ... ಇಸ್ಸೀ... ಎಂಥಾ ಜನವಪ್ಪ! ಹೇಲು ತಿಂತಾರಂತೆ, ಅದೂ ದಿನಾಲೂ ತಿಂತಾರಂತೆ! ಅಂದ್ರೆ ಇವರು ಹಂದಿಯ ವಂಶದವರೇ ಇರಬೇಕು! ಅಪ್ಪ ಅವ್ವ ಇಂಥವರನ್ನ ದಿನಾಲೂ ಬೈಯ್ಯೋದು, ಉಗಿಯೋದು ಸರಿಯಾಗೇ ಇದೆ ಮತ್ತೆ. ಛೀ... ಥೂ... ಹಂದಿಗಳು..." ಅಂದುಕೊಳ್ಳುತ್ತಲೇ ಶಾಲೆಗೆ ಹೊರಡಲು ತಯ್ಯಾರಿ ಮಾಡಿಕೊಳ್ಳತೊಡಗಿತು.